ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು	:	ಶ್ರೀಮತಿ ಭಾರತಿ ಶೆಟ್ಟಿ
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	82
ಉತ್ತರಿಸಬೇಕಾದ ದಿನಾಂಕ	:	15.02.2022
ಉತ್ತರಿಸಬೇಕಾದ ಸಚಿವರು	:	ಸಹಕಾರ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹಕಾರ ಇಲಾಖೆಯಡಿಯಲ್ಲಿ ನೋಂದಾಯಿತ ಸಂಸ್ಥೆ, ಬ್ಯಾಂಕ್, ಸಂಘಗಳು, ನಿಕಾಯ, ಸರ್ಕಾರಿ ಸಂಸ್ಥೆ, ಕ್ಲಬ್ ಇತ್ಯಾದಿಗಳ ಸಂಖ್ಯೆ ಎಷ್ಟು; (ಅಂಕಿ ಅಂಶಗಳನ್ನು ಒದಗಿಸುವುದು)</td><td>ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಇಲಾಖೆಯಡಿಯಲ್ಲಿ ನೋಂದಾಯಿತ ಸಂಸ್ಥೆಗಳ ಅಂಕಿ ಅಂಶಗಳು ಈ ಕೆಳಕಂಡಂತಿವೆ
<table>
<tr><th>ಕ್ರ. ಸಂ.</th><th>ವಿವರ</th><th>ಸಂಖ್ಯೆ</th></tr>
<tr><td>1</td><td>ಸಹಕಾರ ಸಂಘಗಳು</td><td>39,270</td></tr>
<tr><td>2</td><td>ಸಂಘ ಸಂಸ್ಥೆಗಳು</td><td>3,64,233</td></tr>
<tr><td>3</td><td>ಕ್ಲಬ್‌ಗಳು</td><td>6,059</td></tr>
<tr><td>4</td><td>ಸೌಹಾರ್ದ ಸಂಘಗಳು</td><td>5,160</td></tr>
<tr><td>5</td><td>ಲೇವಾದೇವಿದಾರರು</td><td>5,045</td></tr>
<tr><td>6</td><td>ಹಣಕಾಸು ಸಂಸ್ಥೆಗಳು</td><td>8,635</td></tr>
<tr><td>7</td><td>ಗಿರವಿದಾರರು</td><td>7,851</td></tr>
<tr><td>8</td><td>ಚೀಟಿ ನಿಧಿ ಸಂಸ್ಥೆಗಳು</td><td>980</td></tr>
</table></td></tr>
<tr><td>ಆ)</td><td>ಸಹಕಾರ ಸಂಸ್ಥೆಗಳ ಲೆಕ್ಕಪರಿಶೋಧನಾ ವ್ಯವಸ್ಥೆಯನ್ನು ಸಿ.ಎ.ಗಳಿಗೆ ವಹಿಸಿದ ನಂತರ ಸಹಕಾರಿ ಕ್ಷೇತ್ರದಲ್ಲಿ ಏನು ನಡೆಯುತ್ತಿದೆ ಎಂಬುದರ ಸ್ಪಷ್ಟ ಚಿತ್ರಣ ಇಲ್ಲದೆ ಅತಿಹೆಚ್ಚು ಭ್ರಷ್ಟಾಚಾರ, ಅಕ್ರಮ, ವಿವಿಧ ಅಕ್ರಮ ಹಿತಾಸಕ್ತಿಗಳಿಗೆ ಅನುಗುಣವಾಗಿ ನಡೆದಿದ್ದು, ಸಾಮಾನ್ಯ ಸಹಕಾರಿಗಳು ಹಾಗೂ ಸಂಬಂಧಿತ ಜನತೆಗೆ ಮೋಸ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>2013 ರಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಗೆ ಸಮಗ್ರ ತಿದ್ದುಪಡಿಯಾದ ನಂತರ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಕಾರ್ಯವನ್ನು ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಕಾರ್ಯವನ್ನು ಸನ್ನದು ಲೆಕ್ಕ ಪರಿಶೋಧಕರು / ಸನ್ನದು ಲೆಕ್ಕ ಪರಿಶೋಧಕರ ಸಂಸ್ಥೆಗಳು / ಕಾಸ್ಟ್ ಅಕೌಂಟೆಂಟ್ ಗಳು / ಕಾಸ್ಟ್ ಅಕೌಂಟೆಂಟ್ ಸಂಸ್ಥೆಗಳು ನಿರ್ವಹಿಸಲು ಅವಕಾಶ ಕಲ್ಪಿಸಲಾಗಿದ್ದು, ಅದರಂತೆ ಸನ್ನದು ಲೆಕ್ಕ ಪರಿಶೋಧಕರು / ಸನ್ನದು ಲೆಕ್ಕ ಪರಿಶೋಧಕರ ಸಂಸ್ಥೆಗಳು / ಕಾಸ್ಟ್ ಅಕೌಂಟೆಂಟ್ ಗಳು / ಕಾಸ್ಟ್ ಅಕೌಂಟೆಂಟ್ ಸಂಸ್ಥೆಗಳು ಕೈಗೊಂಡಿರುವ ಕೆಲವು ಸಹಕಾರ ಸಂಘಗಳಲ್ಲಿ ಹಣದುರುಪಯೋಗದ ಪ್ರಕರಣಗಳು ಪತ್ತೆ ಹಚ್ಚದಿರುವ ಬಗ್ಗೆ ದೂರುಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಅಂತಹ ಸಂಸ್ಥೆಗಳ ಲೆಕ್ಕ ಪರಿಶೋಧಿತ ಲೆಕ್ಕ ಪತ್ರಗಳನ್ನು ಮರು ಲೆಕ್ಕ ಪರಿಶೋಧನೆ ಕೈಗೊಳ್ಳಲಾಗುತ್ತಿದೆ.</td></tr>
<tr><td>ಇ)</td><td>ಈ ರೀತಿಯ ಅಕ್ರಮಗಳನ್ನು ತೊಡೆದು ಹಾಕಿ ಸಹಕಾರಿ ಕ್ಷೇತ್ರದ ನಡುವಳಿಕೆಗಳನ್ನು ಗಮನಿಸಿ, ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತ ವ್ಯವಸ್ಥೆ ರೂಪಿಸಿ ಸಹಕಾರಿ ಲೆಕ್ಕಪರಿಶೋಧನಾ ಇಲಾಖೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಸರ್ಕಾರದ</td><td>1. ಸಹಕಾರ ಸಂಘಗಳ ಲೆಕ್ಕ ಪರಿಶೋಧನೆಯನ್ನು ಇಲಾಖೆಯ ವತಿಯಿಂದ ಕೈಗೊಳ್ಳಲು ಅನುವಾಗುವಂತೆ ಲೆಕ್ಕ ಪರಿಶೋಧನಾ ಇಲಾಖೆಯಲ್ಲಿ ಖಾಲಿ ಇರುವ 402 ಲೆಕ್ಕ ಪರಿಶೋಧಕರ ಹುದ್ದೆಗಳ ನೇಮಕಾತಿಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.</td></tr>
</table>

	ಚಿಂತನೆಗಳು ಹಾಗೂ ಕ್ರಮಗಳೇನು?	2. ಸಹಕಾರ ಸಂಘಗಳ ಕ್ರಮಬದ್ಧ ಹಾಗೂ ಉತ್ತಮ ಗುಣಮಟ್ಟದ ಲೆಕ್ಕ ಪರಿಶೋಧನೆಗೆ ಅನುವಾಗುವಂತೆ ಲೆಕ್ಕ ಪರಿಶೋಧನಾ ಸಾಮಾನ್ಯ ಮಾರ್ಗಸೂಚಿಗಳನ್ನು ಸಿದ್ಧಪಡಿಸಿ ಬಿಡುಗಡೆಗೊಳಿಸಲು ಕ್ರಮವಹಿಸಲಾಗಿದೆ. ಇದರಿಂದ ಸನ್ನದು ಲೆಕ್ಕಪರಿಶೋಧಕರು ಹಾಗೂ ಇಲಾಖಾ ಪರಿಶೋಧಕರು ಗುಣಮಟ್ಟದ ಲೆಕ್ಕಪರಿಶೋಧನೆ ನಿರ್ವಹಿಸಲು ಸಾಧ್ಯವಾಗುತ್ತದೆ ಹಾಗೂ ಸಹಕಾರ ಸಂಘಗಳು ಮಾರ್ಗಸೂಚಿಯಲ್ಲಿನ ಅಂಶಗಳನ್ವಯ ಲೆಕ್ಕ ಪುಸ್ತಕಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲು ಸಹಕಾರಿಯಾಗುತ್ತದೆ.

ಸಂಖ್ಯೆ: ಸಿಒ 37 ಸಿಎಲ್‌ಎಸ್ 2022

(ಎಸ್.ಟಿ ಸೋಮಶೇಖರ್)
ಸಹಕಾರ ಸಚಿವರು